
# ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯಿಂದ




**ವೇ**ದಾಂತದ ಪ್ರಥಮ ಸಿದ್ಧಾಂತವೇ ಇದು: ಸಾಕ್ಷಾತ್ಕಾರವೇ ಧರ್ಮ. ಯಾರು ಧರ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೋ ಅವರೇ ಧಾರ್ಮಿಕರು. ಯಾರಿಗೆ ಸಾಕ್ಷಾತ್ಕಾರವಾಗಿಲ್ಲವೋ ಅವರು, "ನನಗೆ ಇದು ಗೊತ್ತಿಲ್ಲ" ಎಂದು ಹೇಳುವವರಿಗಿಂತ ಏನೂ ಮೇಲಲ್ಲ, ಕೆಲವು ವೇಳೆ ಕೀಳು. ಏಕೆಂದರೆ ತಿಳಿಯದವನು ಸತ್ಯವಂತ. ತನಗೆ ಗೊತ್ತಿಲ್ಲದುದನ್ನು ಗೊತ್ತಿಲ್ಲ ಎಂದು ಹೇಳುತ್ತಾನೆ. ಧರ್ಮಗ್ರಂಥಗಳು ನಮ್ಮ ಸಾಕ್ಷಾತ್ಕಾರಕ್ಕೆ ಬಹಳ ಸಹಾಯ ಮಾಡುವುವು. ಅವು ಕೇವಲ ನಮ್ಮ ಮಾರ್ಗದರ್ಶಕಗಳಂತೆ ಮಾತ್ರ ಇಲ್ಲ. ನಾವು ಏನು ಮಾಡಬೇಕು, ಹೇಗೆ ಮಾಡಬೇಕು ಎಂಬುದನ್ನೂ ಅವು ತಿಳಿಸಿಕೊಡುತ್ತವೆ. ಏಕೆಂದರೆ ಪ್ರತಿಯೊಂದು ವಿಜ್ಞಾನದಲ್ಲಿಯೂ ಒಂದು ಅನ್ವೇಷಣಾ ಮಾರ್ಗವಿದೆ. ಅನೇಕ ಜನರು ಹೀಗೆ ಹೇಳುವರು: " ನಾನು ಧಾರ್ಮಿಕನಾಗಬೇಕೆಂದಿದ್ದೆ. ನಾನು ಅವುಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಇದ್ದೆ. ಆದರೆ ಅದು ನನಗೆ ಸಾಧ್ಯವಾಗಲಿಲ್ಲ. ಆದಕಾರಣವೇ ನಾನು ಏನನ್ನೂ ನಂಬುವುದಿಲ್ಲ." ವಿದ್ಯಾವಂತರಲ್ಲಿಯೂ ಅನೇಕ ಜನರು ಹೀಗೆಯೇ ಹೇಳುವರು. ಇನ್ನೂ ಹಲವು ಮಂದಿ ಹೀಗೂ ಹೇಳುವರು, "ನಾನು ಇಡೀ ಜೀವನದಲ್ಲಿ ಧಾರ್ಮಿಕನಾಗಬೇಕೆಂದು ಯತ್ನಿಸಿದೆ. ಆದರೆ ಅದರಲ್ಲಿ ಏನೂ ಇಲ್ಲ."

ಆದರೆ ಇದನ್ನು ಗಮನಿಸಿ. ಒಬ್ಬ ರಸಾಯನಶಾಸ್ತ್ರಜ್ಞ, ದೊಡ್ಡ ವಿಜ್ಞಾನಿ ಇರುವನೆಂದು ಭಾವಿಸಿ. ಅವನ ಬಳಿಗೆ ನೀವು ಹೋಗಿ, "ನಾನು ರಸಾಯನಶಾಸ್ತ್ರದಲ್ಲಿ ಏನೂ ನಂಬುವುದಿಲ್ಲ. ಏಕೆಂದರೆ ನಾನು ಇದುವರೆಗೆ ರಸಾಯನಶಾಸ್ತ್ರಜ್ಞನಾಗಬೇಕೆಂದು ಪ್ರಯತ್ನಿಸಿದೆ. ಅದು ಸಾಧ್ಯವಾಗಲಿಲ್ಲ. ಅದರಲ್ಲಿ ಏನೂ ಇಲ್ಲ" ಎಂದರೆ, ಆ ವಿಜ್ಞಾನಿ, "ನೀನು ಯಾವಾಗ ಪ್ರಯತ್ನಿಸಿದೆ?" ಎನ್ನುವನು. "ನಾನು ಮಲಗಲು ಹೋಗುವಾಗ, ಓ ರಸಾಯನಶಾಸ್ತ್ರವೇ, ಬಾ ನನ್ನ ಬಳಿಗೆ ಎಂದೆ. ಆದರೂ ಅದು ಬರಲಿಲ್ಲ" ಎನ್ನುವಿರಿ. ರಸಾಯನಶಾಸ್ತ್ರಜ್ಞ ನಕ್ಕು ಹೀಗೆ ಹೇಳುತ್ತಾನೆ, "ಓ, ಅದಲ್ಲ ಮಾರ್ಗ. ನೀನು ಪ್ರಯೋಗಶಾಲೆಗೆ ಹೋಗಿ, ಆಮ್ಲ, ಕ್ಷಾರ ಇವುಗಳೊಡನೆ ಪ್ರಯೋಗ ಮಾಡು. ನಿನ್ನ ಕೈಯನ್ನು ಏಕೆ ಮಧ್ಯೆ ಸುಟ್ಟುಕೊಳ್ಳಲಿಲ್ಲ? ಅದೇ ತಾನಾಗಿ ನಿನಗೆ ಕಲಿಸುತ್ತಿತ್ತು." ಹೀಗೆಯೇ ಧರ್ಮದಲ್ಲಿ ಕೂಡ. ಧರ್ಮಕ್ಕೂ ಇಷ್ಟು ಶ್ರಮಪಡುತ್ತೀರಾ?

ಪ್ರತಿಯೊಂದು ವಿಜ್ಞಾನಶಾಸ್ತ್ರವನ್ನು ಕಲಿಯಬೇಕಾದರೂ ಒಂದು ಮಾರ್ಗವಿದೆ. ಧರ್ಮವನ್ನು ಕೂಡ ಇದರಂತೆಯೇ ಅಭ್ಯಾಸ ಮಾಡಬೇಕು. ಇದರದೇ ಬೇರೊಂದು ಮಾರ್ಗವಿದೆ. ಎಲ್ಲರೂ ಹಿಂದಿನ ಆಚಾರ್ಯರಿಂದ, ಅನುಭವಗಳಿಂದ ಸಾಕ್ಷಾತ್ಕಾರವನ್ನು ಪಡೆದವರಿಂದ ಏನನ್ನಾದರೂ ಕಲಿತುಕೊಳ್ಳಬಹುದು, ಕಲಿತುಕೊಳ್ಳಲೇ ಬೇಕು. ಅವರು ನಮಗೊಂದು ಮಾರ್ಗವನ್ನು ಸೂಚಿಸುವರು. ಯಾವ ಮಾರ್ಗದ ಮೂಲಕ ನಾವು ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬಹುದೋ ಆ ಮಾರ್ಗವನ್ನು ತೋರುವರು.

ಹಲವು ಧರ್ಮಗಳಲ್ಲಿ ಒಂದು ಮೂಲಸಿದ್ಧಾಂತ ಹರಿಯುತ್ತಿದೆ. ಅದು ಆಗಲೇ ಪ್ರಕಟವಾಗಿದೆ. ಪ್ರತಿಯೊಂದು ವಿಜ್ಞಾನವೂ, ಎಲ್ಲಿ ಒಂದು ಏಕತೆಯನ್ನು ಕಾಣುವುದೋ ಅಲ್ಲಿ ಕೊನೆಗಾಣಬೇಕಾಗುವುದು. ಅಲ್ಲಿಂದ ಮುಂದಕ್ಕೆ ನಾವು ಹೋಗಲಾರೆವು. ಒಂದು ಪರಿಪೂರ್ಣ ಏಕತೆಯನ್ನು ಪಡೆದಾದ ಮೇಲೆ ಅದು ಯಾವ ಹೊಸ ಸಿದ್ಧಾಂತವನ್ನೂ ಹೇಳಲಾರದು. ಧರ್ಮವು ಮಾಡಬೇಕಾದ ಕೆಲಸವೇ ಅದರ ವಿವರಗಳನ್ನು ಕುರಿತು ಆಲೋಚಿಸುವುದು. ಯಾವ ವಿಜ್ಞಾನಶಾಸ್ತ್ರವನ್ನಾದರೂ ತೆಗೆದುಕೊಳ್ಳಿ, ಉದಾಹರಣೆಗೆ ರಸಾಯನಶಾಸ್ತ್ರ. ಯಾವ ಒಂದು ವಸ್ತುವಿನಿಂದ ಉಳಿದ ಎಲ್ಲಾ ವಸ್ತುಗಳನ್ನೂ ನಾವು ಸೃಷ್ಟಿಸಬಹುದೋ ಅದು ನಮಗೆ ದೊರೆಯಿತು ಎಂದು ಇಟ್ಟುಕೊಳ್ಳೋಣ. ಆಗ ರಸಾಯನಶಾಸ್ತ್ರವು ವಿಜ್ಞಾನದ ದೃಷ್ಟಿಯಿಂದ ಪರಿಪೂರ್ಣವಾದಂತೆ. ಅನಂತರ ನಮಗೆ ಏನು ಉಳಿಯುವುದೆಂದರೆ, ಆ ಒಂದು ವಸ್ತುವಿನ ಹೊಸ ಹೊಸ ಸಂಯೋಗಗಳನ್ನು ಕಂಡುಹಿಡಿಯುವುದು ಮತ್ತು ಅದನ್ನು ಜೀವನದಲ್ಲಿ ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬುದನ್ನು ಆಲೋಚಿಸಿನೋಡುವುದು.

ಇದರಂತೆಯೇ ಧರ್ಮ ಕೂಡ. ಧರ್ಮದ ಅದ್ಭುತ ನಿಯಮಾವಳಿಗಳನ್ನು, ಅದರ ರಚನೆ ಮತ್ತು ವ್ಯಾಪ್ತಿಗಳನ್ನು ಶತಶತಮಾನಗಳ ಹಿಂದೆಯೇ ಕಂಡುಹಿಡಿದಿದ್ದಾರೆ. ವೇದಗಳಲ್ಲಿ ಉಕ್ತವಾಗಿರುವ **"ಸೋಽಹಂ" – ನಾನೇ ಅವನು** ಎಂಬ ಉಚ್ಚತಮ ಭಾವನೆಯೇ ಅದು. ಇಲ್ಲಿ ಚೇತನ–ಅಚೇತನಗಳೆರಡೂ ಸಂಧಿಸುವುವು. ಇದನ್ನೇ ದೇವರು, ಅಲ್ಲಾಹು, ಬ್ರಹ್ಮ, ಜಿಹೋವ ಮುಂತಾದ ಹೆಸರುಗಳಿಂದ ಕರೆಯುವರು. ನಾವು ಇದನ್ನು ವ್ಯತಿಕ್ರಮಿಸಿ ಹೋಗಲಾರೆವು. ನಮಗಾಗಿ ಈ ಅದ್ಭುತ ನಿಯಮಾವಳಿ ಈಗಾಗಲೇ ಸಿದ್ಧವಾಗಿದೆ. ಅದನ್ನು ನಮ್ಮ ನಿತ್ಯಜೀವನದಲ್ಲಿ ಅನುಷ್ಠಾನಕ್ಕೆ ತರುವುದೊಂದು ಮಾತ್ರ ಉಳಿದಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಮಹಾತ್ಮರಾಗುವುದಕ್ಕೆ ಯತ್ನಿಸಬೇಕಾಗಿದೆ. ಇದೊಂದು ಮಹಾನ್‌ಕಾರ್ಯ ನಮ್ಮ ಮುಂದೆ ಇದೆ.

★

# ವೇದಾಂತಿ ವಿಜ್ಞಾನಿ ಎರ್ವಿನ್ ಸ್ಕ್ರೋಡಿಂಗರ್

ಡಾ. ಎನ್.ಬಿ. ದೇಸಾಯಿ

**ಅತ್ಯಂತ ಶ್ರೇಷ್ಠ ಭೌತವಿಜ್ಞಾನಿಯಾಗಿದ್ದ ಸ್ಕ್ರೋಡಿಂಗರ್ ಭಾರತೀಯ ಅದ್ವೈತ ಸಿದ್ಧಾಂತದ ಪ್ರಬಲ ಸಮರ್ಥಕರಾಗಿದ್ದರು. ಇವರ ಜೀವನ ಮತ್ತು ಚಿಂತನೆಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರು; ರಾಮಕೃಷ್ಣ ಆಶ್ರಮದ ಭಕ್ತರು.**

**ಎ**ರ್ವಿನ್ ಸ್ಕ್ರೋಡಿಂಗರ್ ಆಸ್ಟ್ರಿಯಾ ದೇಶಕ್ಕೆ ಸೇರಿದ ಮಹಾನ್ ಭೌತವಿಜ್ಞಾನಿ. ಇವರನ್ನು ಕ್ವಾಂಟಮ್ ಭೌತವಿಜ್ಞಾನಶಾಖೆಯ ಜನಕ ಎಂದು ಕರೆಯುತ್ತಾರೆ. ಸುಪ್ರಸಿದ್ಧ ತತ್ತ್ವಜ್ಞಾನಿಯಾದ ಹೆನ್ರಿ ಥೋರೋ ಅವರ ಪ್ರಕಾರ ಜಗತ್ತಿನ ಇತಿಹಾಸದಲ್ಲಿ ಸಂಭವಿಸಿದ ನಾಲ್ಕನೆಯ ಅತ್ಯಂತ ಮಹತ್ವದ ಸಂಗತಿಯೇ ಕ್ವಾಂಟಮ್ ಭೌತವಿಜ್ಞಾನದ ಅವತರಣ. ಉಳಿದ ಮೂರು ಸಂಗತಿಗಳೆಂದರೆ, ಏಸುಕ್ರಿಸ್ತನನ್ನು ಶಿಲುಬೆಗೆ ಏರಿಸಿದ್ದು, ಕೊಲಂಬಸ್ ಅಮೆರಿಕ ಕಂಡುಹಿಡಿದಿದ್ದು ಮತ್ತು ಫ್ರಾನ್ಸ್ ದೇಶದ ಕ್ರಾಂತಿ. ಕ್ವಾಂಟಮ್ ಭೌತವಿಜ್ಞಾನವು ಅತ್ಯಂತ ಕಠಿಣವಾದ ಶಾಸ್ತ್ರವಿಷಯ. ಸ್ಕ್ರೋಡಿಂಗರ್ ಇದರ ಶ್ರೇಷ್ಠ ಪರಿಣಿತರೆನಿಸಿಕೊಂಡಿದ್ದರು.



ಎರ್ವಿನ್ ಸ್ಕ್ರೋಡಿಂಗರ್ ೧೮೮೭ ರಲ್ಲಿ ವಿಯನ್ನಾ ನಗರದಲ್ಲಿ ಜನ್ಮ ತಾಳಿದರು. ಅವರು ಮರಣ ಹೊಂದಿದ್ದೂ ವಿಯನ್ನಾದಲ್ಲಿಯೇ, ೧೯೬೧ ರಲ್ಲಿ. ಇಪ್ಪತ್ತನೆಯ ಶತಮಾನದ ಶ್ರೇಷ್ಠ ಭೌತವಿಜ್ಞಾನಿಗಳ ಗುಂಪಿಗೆ ಅವರು ಸೇರಿದ್ದರು. ೧೯೩೩ ರಲ್ಲಿ ನೊಬೆಲ್ ಪಾರಿತೋಷಕವನ್ನು ಅವರು ಪಡೆದುಕೊಂಡರು.

ಸುವಿಖ್ಯಾತ ವಿಜ್ಞಾನಿಯಾಗಿದ್ದುದಲ್ಲದೆ, ಎರ್ವಿನ್ ಸ್ಕ್ರೋಡಿಂಗರ್ ಶ್ರೇಷ್ಠ ಮಟ್ಟದ ಚಿಂತಕರೂ ಆಗಿದ್ದರು. ಅವರ ಅನೇಕ ಪುಸ್ತಕಗಳು ಮತ್ತು ಬರಹಗಳು ಅತ್ಯಂತ ಜನಪ್ರಿಯವಾಗಿವೆ. ಭಾರತೀಯ ಮೂಲದ ಅದ್ವೈತ ಸಿದ್ಧಾಂತಕ್ಕೆ ಅವರು ಮಾರುಹೋಗಿದ್ದರೆನ್ನುವುದು ಅತ್ಯಂತ ವಿಶಿಷ್ಟವಾದ ವಿಷಯ. ಪ್ರತಿಭಾಶಾಲಿಯಾದ ಈ ವಿಜ್ಞಾನಿ ತತ್ತ್ವಶಾಸ್ತ್ರಜ್ಞರಾಗಿ ರೂಪುಗೊಂಡ ಬಗೆ ಸ್ವಾರಸ್ಯಕರವಾದುದು. ಇದಕ್ಕೆ ಭಾರತೀಯ ಚಿಂತನೆಗಳು ಅವರ ಮೇಲೆ ಮಾಡಿದ ಗಾಢಪ್ರಭಾವವೂ ಒಂದು ಪ್ರಮುಖ ಕಾರಣವಿದ್ದೀತು.

೧೯೨೦ ರ ದಶಕದಲ್ಲಿ ಸ್ಕ್ರೋಡಿಂಗರ್ ಎಲೆಕ್ಟ್ರಾನ್ ಕಣಗಳ ಮೇಲೆ ತಮ್ಮ ಸಂಶೋಧನೆಯನ್ನು ನಡೆಸುತ್ತಿದ್ದರು. ಎಲೆಕ್ಟ್ರಾನ್ ಕಣಗಳು ವರ್ತಿಸುವ ವಿಧಾನ ನಿಗೂಢವಾದುದು, ಸಾಂಪ್ರದಾಯಿಕ ಭೌತಶಾಸ್ತ್ರದ ಪರಿಧಿಗೆ ಮೀರಿದುದು. ಎಲೆಕ್ಟ್ರಾನ್‌ನ ಚಲನೆಯನ್ನು ಗಣಿತದ ಪ್ರಮೇಯಗಳಿಂದ ವಿವರಿಸುವ ಪ್ರಯತ್ನವನ್ನು ಅವರು ಮಾಡುತ್ತಿದ್ದರು. ಆ ಮೂಲಕ ತಮ್ಮ ಮನಸ್ಸಿನಲ್ಲಿ ಆ ಕಣವನ್ನು ಕೆಣಕುತ್ತಿದ್ದರು. ಅದಕ್ಕೆ ಅವರು ಹಾಕಿದ ಪ್ರಶ್ನೆ 'ನೀನಾರು?' ಎಂದು. ಎಲೆಕ್ಟ್ರಾನ್ ಮೊಂಡ ಹುಡುಗನಂತೆ ವರ್ತಿಸಿತಂತೆ. ಸ್ಕ್ರೋಡಿಂಗರ್ ಮಹಾಶಯನಿಗೇ, "ನನ್ನನ್ನು ಅರಿಯಲು ನೀನ್ಯಾರು?" ಎಂಬ ಪ್ರಶ್ನೆಯನ್ನು ಹಾಕಿತಂತೆ. ಈ ಮಾನಸಿಕ ಸಂವಾದವೇ ಅವರನ್ನು "Seek For the Road" (ಹಾದಿಯ ಅನ್ವೇಷಣೆಯಲ್ಲಿ) ಎನ್ನುವ ಪುಸ್ತಕವನ್ನು ಬರೆಯಲು ಪ್ರಚೋದಿಸಿತು. ಇದರಲ್ಲಿ "ನಾನು ಯಾರು?" ಎಂಬ ಪ್ರಶ್ನೆಯನ್ನು ಎತ್ತಿಕೊಂಡು ವೈಜ್ಞಾನಿಕವಾಗಿ ವಿಚಾರ ಮಾಡಿದ್ದಾರೆ. ಈ ಪುಸ್ತಕದಲ್ಲಿರುವ ಎರಡು ಪ್ರಸಿದ್ಧ ಪ್ರಬಂಧಗಳೆಂದರೆ,"What is Real?" (ಯಾವುದು ಸತ್ಯ?), "My World View" (ನನ್ನ ಜಾಗತಿಕ ದೃಷ್ಟಿ).

ಸ್ಕ್ರೋಡಿಂಗರ್ ಅವರ ಮತ್ತೊಂದು ಪುಸ್ತಕವೆಂದರೆ, "What is Life?" (ಜೀವನವೆಂದರೆ ಏನು?) ಪ್ರಾಣಿಶಾಸ್ತ್ರ ಮತ್ತು ಭೌತವಿಜ್ಞಾನದ ಪರಿಭಾಷೆಯಲ್ಲಿ ಈ ಪುಸ್ತಕವು ರಚಿತವಾಗಿದೆ. ಅರ್ಥ ಮಾಡಿಕೊಳ್ಳುವುದು ಕ್ಲಿಷ್ಟಕರವಾಗಿದ್ದರೂ ವಿಜ್ಞಾನಿಗಳ ಮನಸ್ಸನ್ನು ಸೂರೆಗೊಂಡ ಗ್ರಂಥ ಇದು. ಇದು ಜೀವವಿಜ್ಞಾನ ವಿಭಾಗದಲ್ಲಿ ಕ್ರಾಂತಿಯನ್ನೇ ಉಂಟು ಮಾಡಿತು. ಅಣುಜೀವವಿಜ್ಞಾನವೆಂಬ (Molecular Biology) ನೂತನ ವಿಜ್ಞಾನ ವಿಭಾಗವೇ ಅದರ ವಿಷಯವಾಗಿತ್ತು. ಈಗ ಈ ವಿಭಾಗದಲ್ಲಿ ಅನೇಕ ಜನ ತಜ್ಞರು ಸಂಶೋಧನೆಗಳನ್ನು ನಡೆಸುತ್ತಿದ್ದಾರೆ.

ಎರ್ವಿನ್ ಸ್ಕ್ರೋಡಿಂಗರ್ ಅವರು ವೇದಾಂತದ ಬಗ್ಗೆ ತಳೆದಿದ್ದ ಭಾವನೆಗಳೇ ಅವರ ಹಲವಾರು ಪ್ರಬಂಧಗಳಲ್ಲಿ ಸುಸ್ಪಷ್ಟವಾಗಿ ಮೂಡಿಬಂದಿವೆ. ಅವುಗಳನ್ನು ಕೆಳಗಿನ ಕಾಲ್ಪನಿಕ ಪ್ರಶ್ನೋತ್ತರದ ರೂಪದಲ್ಲಿ ತಿಳಿದುಕೊಳ್ಳಲು ಪ್ರಯತ್ನಿಸೋಣ:

**ವೇದಾಂತವೆಂದರೇನು?:** ಜೀವಿಗಳಾದ ನಾವು ಒಬ್ಬರಿಗೊಬ್ಬರಿಗೆ ಸೇರಿದವರಾಗಿದ್ದೇವೆ. ಅಂದರೆ, ನಾವೆಲ್ಲರೂ ಏಕಮೇವ ತತ್ತ್ವದ ಅಂಶಗಳಾಗಿದ್ದೇವೆ. ಇದನ್ನೇ ಪಾಶ್ಚಾತ್ಯ ಪರಿಭಾಷೆಯಲ್ಲಿ ದೇವರು